






ಗಂಜಿ ಬಂಗಡೆ ತೂರೆ
ಶಬ್ದ ಸೋಲುವ ಮೇರೆ
ಅಯ್ಯಾ ಉತ್ತರ ಕನ್ನಡಾ
ನೀ ಹೀಂಗೆ ತೀಡೆಡಾ

***

ಶಕ್ತಿಯಲ್ಲ ನೆಲದಲಿಂಗಿ
ಭಕ್ತಿಯೆಲ್ಲ ಬಾನಲಿಂಗಿ
ಮಳ್ಳುಗಾಳಿ ಮಳೆಯಂತೆ
ಸೋಗೆಯಲ್ಲಿ ಸೋರೆಡಾ...

***

ಈ ವಿಡಿಯೊ ನೋಡುತ್ತಾ ಹಾಡು ಕೇಳಿದರೆ ಮಲೆನಾಡಿನ ಸ್ವಚ್ಛಂದ ಬದುಕು ಸ್ವತಂತ್ರ ಸಂಗೀತದಲ್ಲಿ ಪಡಿಮೂಡಿದಂತಿದೆ. ಈ ಹಾಡು ಕೂಡ ಯೂಟ್ಯೂಬ್‌ನಲ್ಲಿ ಅಪಾರ ಮೆಚ್ಚುಗೆ ಗಳಿಸಿದೆ.

ನಾರಾಯಣ ಶರ್ಮ, ಬೆಂಗಳೂರಿನ ಬಿಎಂಎಸ್ ಕಾಲೇಜಿನಲ್ಲಿ ಬಿಇ ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ಪದವೀಧರ. ಇಂಡೀ ಸಂಗೀತದ ಬಗ್ಗೆ ಅನಿಸಿಕೆ ವ್ಯಕ್ತಪಡಿಸುವ ನಾರಾಯಣ, ‘ಯಾವುದೇ ಚೌಕಟ್ಟುಗಳಿಲ್ಲದೆ ನಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ವ್ಯಕ್ತಪಡಿಸಬಹುದು. ಸಿನಿಮಾದಲ್ಲಿ ಒಂದು ಚೌಕಟ್ಟು ಇರುತ್ತದೆ. ನಿರ್ದೇಶಕರು ಹೇಳಿದ ಹಾಗೆ ಹಾಡಬೇಕು. ಆದರೆ ಇಂಡೀ ಸಂಗೀತದಲ್ಲಿ ಯಾವುದೇ ಚೌಕಟ್ಟು ಇಲ್ಲದೆ ನಮ್ಮ ಅಭಿರುಚಿ, ನಮಗೆ ಏನನಿಸುತ್ತೋ ಅದನ್ನು ಹಾಡಬಹುದು. ನಮ್ಮ ಕೌಶಲದ ಪರಿಧಿಯೊಳಗೆ ಮಾಡುವ, ಹಾಡುವ ಹಾಡು ಇದು’.

‘ಬಾಲಿವುಡ್‌ನಲ್ಲಿ ಈಚೆಗೆ ಹಾಲಿವುಡ್ ಸಿನಿಮಾ ಸಂಗೀತ ತರಹ ಮಾಡ್ತಿದ್ದಾರೆ, ಹಾಲಿವುಡ್ ಸಿನಿಮಾದಲ್ಲಿ ಈಗಾಗಲೇ ಇರುವ ಹಾಡುಗಳನ್ನು ತೆಗೆದುಕೊಂಡು ಆಯಾಯ ಸನ್ನಿವೇಶಕ್ಕೆ ತಕ್ಕಂತೆ ಬಳಸ್ತಾರೆ. ಕನ್ನಡ ಸಿನಿಮಾದಲ್ಲೂ ಇದೇ ರೀತಿಯ ವಾತಾವರಣ. ಉದಾಹರಣೆಗೆ ಕವಿ ಗೋಪಾಲಕೃಷ್ಣ ಅಡಿಗರ ‘ಯಾವ ಮೋಹನ ಮುರಳಿ ಕರೆಯಿತು’ ಹಾಡನ್ನು ಮನೋಮೂರ್ತಿ ಅವರು ‘ಅಮೆರಿಕ ಅಮೆರಿಕ’ ಚಿತ್ರಕ್ಕೆ ಬಳಸಿದ್ದಾರೆ. ಸನ್ನಿವೇಶಕ್ಕೆ ತಕ್ಕಂತೆ ಹಾಡನ್ನು ಬಳಸಿಕೊಂಡಿದ್ದಾರೆ’.

‘ಇದು ಅಕೌಸ್ಟಿಕ್ ಅಂದರೆ ಲೈವ್ ಇನ್‌ಸ್ಟ್ರುಮೆಂಟ್ ಬಳಸಿ ಮಾಡಿದ ಹಾಡುಗಳು. ಕೆಲವು ರಾಕ್ ಪ್ರಭಾವ (ಕಛೇರಿ ಅಂತ ಬ್ರ್ಯಾಂಡ್ ಇದೆ) ಇದರಲ್ಲಿ ದೇಸಿ ಮೆಲೊಡಿ ಇದೆ, ನಮ್ಮ ಭಾಷೆಗೆ ಅನುಗುಣವಾಗಿ ಪ್ರಾದೇಶಿಕ ರಾಗಗಳನ್ನು ಬಳಸಿ, ಪಾಶ್ಚಾತ್ಯ ಪ್ರಭಾವವನ್ನೂ ಸೇರಿಸಿ ಸಂಗೀತ ಮಾಡ್ತಾ ಇದ್ದೇನೆ. ಈ ಸಂಗೀತ ನೈಸರ್ಗಿಕವಾಗಿ ಕನೆಕ್ಟ್ ಆಗುತ್ತದೆ. ನಮ್ಮ ಜೀವನ ಅನುಭವಗಳು, ಸಹಜ ಭಾವನೆಗಳು ತುಂಬ ಇರುತ್ತವೆ. ಹೀಗಾಗಿ ಜನ ಚೆನ್ನಾಗಿ ಸ್ಪಂದಿಸ್ತಾರೆ’.

ಇವರ ಮತ್ತೊಂದು ಇಂಡೀ ಹಾಡು...

ಬಾನಂಚ ದಾಟಿ ಇಂದು, ತಾರೆಯ ಕಂಡು
ಊರಾಚೆ ಸಾಗಿ ನಿಂತು, ಹೂವೊಂದ ತಂದು
ಝರಿಯ ನೀರಿದು, ಆವಿಯಾಗಿ, ನವಿರಾದ ಮೋಡವ ಸೇರಿ
ಬಾನ ತೇರಿಗೆ ಏರಿ, ನಾಳೆಗಾಗಿ ಮಳೆಯೇ ಸುರಿ’

ಇದು ಕೂಡ ವೈರಲ್ ಆಗಿದ್ದು ಮೆಚ್ಚುಗೆ ಗಳಿಸಿದೆ. ಬಿಯಾಂಡ್ ಹ್ಯೂಸ್ (beyond hues) ನಿರ್ಮಾಣ, ಸುಮೇಧ ಕೆ. ಸಾಹಿತ್ಯ ರಚನೆ.

ನಾರಾಯಣ ಶರ್ಮ ಅವರ ಇಂಡೀ ಸಂಗೀತದ ಕೊಂಡಿ ಇಲ್ಲಿದೆ. **https://youtu.be/BJgIBC4w5g?si=SfNPPpDohS_QHBzjhttps://youtu.be/3YbVZ5f4Gj0?si=k75pri5M3KcL04HV**

ಮಾಡಿದ ದಿನವು ನಿನ್ನ ಜಪವ
ಪ್ರೀತಿಗೆ ಎಳೆದಿದೆ ನನ್ನ ನೀನು
ಮನಸಲಿ ಕನಸಲಿ ಜಾರಿದೆ ನಾನು
ಕಣ್ಮನ ಹೃದಯವ ಸೆಳೆದಿದೆ ನೀನು
ನೋಡುತ್ತ ನೋಡುತ್ತ ಬಿದ್ದೆ ನಾನು
ಇದೇನು ಮಾಯೆಯು ನಿನ್ನ ನೋಟವು

***

ಗುಲಾಬಿ ಸೀರೆಯ ನೀನು ಉಟ್ಟು
ಕೈತುಂಬ ಬಳೆಯ ತೊಟ್ಟು
ಕೆಂಪಿನ ಬೊಟ್ಟು ಹಾಟ್ ಹೀಟು
ಮಿಸ್ ಆಗಿದೆ ಒಂದು ಎದೆಯ ಬೀಟು
ಇದೇನು ಮಾಯೆಯು ನಿನ್ನ ನೋಟವು
ಕೆನೆಯು ಕೆಂಪಿನ ಗುಲಾಬಿ ಹೂವ
ಕೂದಲು ಹರಡಿದ ನಿನ್ನ ಮುಗವ1

ಈ ಹಾಡಿನ ಲಿಂಕ್ ಇಲ್ಲಿದೆ. **https://www.youtube.com/watch?v=FDCc2beB77I** ನೀವೂ ಕೇಳಿ ಆನಂದಿಸಿ, ಆಸ್ವಾದಿಸಿ!

ಈಗ ಇಂಡೀ ಸಂಗೀತ ಎಂದರೇನು ಎಂಬ ವ್ಯಾಖ್ಯಾನ ನೋಡೋಣ.

ಇಂಡೀ ಸಂಗೀತ ಎಂದರೆ ಸ್ವತಂತ್ರ ಸಂಗೀತ ಎಂದರ್ಥ. ಲಾಲಿತ್ಯದ ಸಾಹಿತ್ಯ, ಕರ್ಣ ರಸಾಯನ

**ವಿದೇಶದಲ್ಲಿರುವವರು ಭಾರತೀಯ ಕಲಾವಿದರನ್ನು ಹುರಿದುಂಬಿಸುತ್ತಾರೆ, ಹೀಗಾಗಿ ದೇಶೀ ಕಲಾವಿದರು ಮಿಂಚುತ್ತಿದ್ದಾರೆ. ಇಂಡೀ ಸಂಗೀತ ಸಮುದಾಯವು ಖ್ಯಾತಿಯ ಉತ್ತುಂಗಕ್ಕೇರುತ್ತಿದೆ. ಅನೇಕ ಯುವಕಲಾವಿದರು ವೃತ್ತಿಯಾಗಿ ಮುಂದುವರಿಸಲೂ ಆಸಕ್ತರಾಗಿದ್ದಾರೆ.**

**-ವಿವೇಕ್ ವರ್ಮಾ**, ಗಾಯಕ ಹಾಗೂ ಗೀತರಚನೆಕಾರ